159

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಡಳಿತ ಸಹಾಯಕರ ಸಂಭಾವನೆಯನ್ನು ಹೆಚ್ಚಿಸುವುದಕ್ಕೆ ಹಾಗೂ ತಾಲ್ಲೂಕು ಸೇವೆಗಳ ಸಮಿತಿಗಳಲ್ಲಿ ಹೆಚ್ಚುವರಿಯಾಗಿ ಒಂದು ಗುಮಾಸ್ತ-ವ-ಬೆರಳಚ್ಚುಗಾರರ ಹುದ್ದೆ ಸೃಜಿಸುವುದಕ್ಕೆ ಸಂಬಂಧಿಸಿದಂತೆ.

**ಓದಲಾಗಿದೆ:**

1) ಸರ್ಕಾರದ ಅಧಿಸೂಚನೆ ಸಂಖ್ಯೆ ಲಾ 17 ಎಲ್ ಎಡಿ 2008, ದಿನಾಂಕ 18/05/2009
2) ಸರ್ಕಾರದ ಅಧಿಸೂಚನೆ ಸಂಖ್ಯೆ ಲಾ 57 ಎಲ್ಎಡಿ 2010, ದಿನಾಂಕ 27/07/2011
3) ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರ ಪತ್ರ ಸಂಖ್ಯೆ ಕರಾಕಾಸೇಪ್ರಾ /03/ಎಡಿಎಂ/2007 ದಿನಾಂಕ 03-04-2014 ಮತ್ತು 07/10/2014.
4) ಸರ್ಕಾರದ ಪತ್ರ ಸಂಖ್ಯೆ ಲಾ 123 ಎಲ್ ಎಡಿ 2014, ದಿನಾಂಕ 15/09/2014.

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯನ್ವಯ ತಾಲ್ಲೂಕು ಕಾನೂನು ಸೇವೆಗಳ ಸಮಿತಿಗಳಲ್ಲಿ ಕಾರ್ಯನಿರ್ವಹಿಸುವ ಗುಮಾಸ್ತ-ವಾ-ಬೆರಳಚ್ಚುಗಾರರ ಸಂಭಾವನೆಯನ್ನು ರೂ. 700/- ರಿಂದ ರೂ. 2,000/- ಗಳಿಗೂ ಹಾಗೂ ದಲಾಯತ್‌ಗಳ ಸಂಭಾವನೆಯನ್ನು ರೂ. 300/- ರಿಂದ ರೂ. 1,200/- ಗಳಿಗೆ ಹೆಚ್ಚಿಸಲಾಗಿರುತ್ತದೆ.

ಮೇಲೆ (2) ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯನ್ವಯ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಡಳಿತ ಸಹಾಯಕರ ಸಂಭಾವನೆಯನ್ನು ರೂ. 2,500/- ರಿಂದ 4,000/- ಗಳಿಗೂ ಹಾಗೂ ದಲಾಯತ್‌ಗಳ ಸಂಭಾವನೆಯನ್ನು ರೂ. 1,500/- ರಿಂದ ರೂ. 2,500/- ಗಳಿಗೆ ಹೆಚ್ಚಿಸಲಾಗಿರುತ್ತದೆ.

ಮೇಲೆ (3) ರಲ್ಲಿ ಓದಲಾದ ದಿನಾಂಕ 03/04/2014 ಮತ್ತು 07/10/2014ರ ಪತ್ರಗಳಲ್ಲಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರು ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿ ಪತ್ರ ಸಂಖ್ಯೆ ಕರಾಕಾಸೇಪ್ರಾ: 55 ಎಡಿಎಂ 2013 ದಿನಾಂಕ 10/05/2013 ರಲ್ಲಿ 29 ನೇ ಸರ್ವ ಸದಸ್ಯರ ಸಭೆಯ ತೀರ್ಮಾನದನ್ವಯ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳು ಹಾಗೂ ತಾಲ್ಲೂಕು ಸೇವೆಗಳ ಸಮಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಡಳಿತ ಸಹಾಯಕರು ಹಾಗೂ ದಲಾಯತ್ ರವರ ಮಾಸಿಕ ಸಂಭಾವನೆಯನ್ನು ಕ್ರಮವಾಗಿ ರೂ. 4,000/- ದಿಂದ 5,000/- ಗಳಿಗೆ ಹಾಗೂ ರೂ. 2,500/-ದಿಂದ 3,000/- ಗಳಿಗೆ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗುಮಾಸ್ತ-ವಾ-ಬೆರಳಚ್ಚುಗಾರರ ಹಾಗೂ ದಲಾಯತ್ ರವರಿಗೆ ಮಾಸಿಕ ಸಂಭಾವನೆಯನ್ನು ಕ್ರಮವಾಗಿ ರೂ. 2,500/- ದಿಂದ 5,000/- ವರೆಗೆ ಹಾಗೂ 1,500/- ದಿಂದ 3,000/- ಗಳಿಗೆ ಹೆಚ್ಚಿಸಲಾಗಿರುತ್ತದೆಂದು ಹಾಗೂ 31ನೇ ಸರ್ವ ಸದಸ್ಯರ ಸಭೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಡಳಿತ ಸಹಾಯಕರ ಮಾಸಿಕ ಸಂಭಾವನೆಯನ್ನು ರೂ. 5,000/- ರಿಂದ ರೂ. 8,000/- ಗಳಿಗೆ ಹೆಚ್ಚಿಸಲು ಹಾಗೂ ಪ್ರತಿಯೊಂದು ತಾಲ್ಲೂಕು ಕಾನೂನು ಸೇವಾ ಸಮಿತಿಗೆ ಒಂದು ಹೆಚ್ಚುವರಿ ಗುಮಾಸ್ತ-ವಾ-ಬೆರಳಚ್ಚುಗಾರರ ಹುದ್ದೆಯನ್ನು ಮಾಸಿಕ ಸಂಭಾವನೆ ರೂ. 4,000/- ಗಳಲ್ಲಿ ಸೃಜಿಸಲು ತೀರ್ಮಾನಿಸಲಾಗಿದೆಯೆಂದು ತಿಳಿಸಿರುತ್ತಾರೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ
ಬೆಂಗಳೂರು
ಕ್ರಮ ಸಂಖ್ಯೆ 7502
3 AUG 2015

2/-

ಸದರಿ ತೀರ್ಮಾನದನ್ವಯ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಡಳಿತ ಸಹಾಯಕರ ಮಾಸಿಕ ಸಂಭಾವನೆಯನ್ನು ರೂ. 5,000/- ರಿಂದ ರೂ. 8,000/- ಗಳಿಗೆ ಹೆಚ್ಚಿಸಲು ಹಾಗೂ ಪ್ರತಿಯೊಂದು ತಾಲ್ಲೂಕು ಕಾನೂನು ಸೇವಾ ಸಮಿತಿಗೆ ಒಂದು ಹೆಚ್ಚುವರಿ ಗುಮಾಸ್ತ-ವಾ-ಬೆರಳಚ್ಚುಗಾರರ ಹುದ್ದೆಯನ್ನು ಮಾಸಿಕ ಸಂಭಾವನೆ ರೂ. 4,000/- ಗಳಲ್ಲಿ ಸೃಜಿಸಿ ಮಂಜೂರಾತಿ ನೀಡುವಂತೆ ಹಾಗೂ ಈ ಬಗ್ಗೆ ತಗಲುವ ವೆಚ್ಚವನ್ನು ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ ಸರ್ಕಾರವು ಬಿಡುಗಡೆ ಮಾಡುವ ಅನುದಾನದಿಂದ ಭರಿಸಲಾಗುವುದೆಂದು ಪ್ರಾಧಿಕಾರವು ತಿಳಿಸಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಲಾ 123 ಎಲ್‌ಎಡಿ 2014**

**ಬೆಂಗಳೂರು, ದಿನಾಂಕ: 24/07/2015**

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಡಳಿತ ಸಹಾಯಕರ ಮಾಸಿಕ ಸಂಭಾವನೆಯನ್ನು ರೂ. 5,000/- ರಿಂದ 8,000/-ಗಳಿಗೆ ಹೆಚ್ಚಿಸಲು ಹಾಗೂ ಪ್ರತಿಯೊಂದು ತಾಲ್ಲೂಕು ಕಾನೂನು ಸೇವಾ ಸಮಿತಿಗೆ ಒಂದು ಹೆಚ್ಚುವರಿ ಗುಮಾಸ್ತ-ವಾ-ಬೆರಳಚ್ಚುಗಾರರ ಹುದ್ದೆಯನ್ನು ಮಾಸಿಕ ಸಂಭಾವನೆ ರೂ. 4,000/-ದಂತೆ ಸೃಜಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 214 ವೆಚ್ಚ-10/2015 ದಿನಾಂಕ 13/07/2015 ರಲ್ಲಿ ನೀಡಿರುವ ಸಹಮತಿ ಅನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

Sayeeda Bano 24/7/15
**(ಸಯೀದಾ ಬಾನು)**
**ಸರ್ಕಾರದ ಅಧೀನ ಕಾರ್ಯದರ್ಶಿ**
**ಕಾನೂನು ಇಲಾಖೆ (ಆಡಳಿತ-2)**

**ಇವರಿಗೆ:**

1. ಮಹಾಲೇಖಪಾಲರು (ಎ ಮತ್ತು ಇ, ಲೆಕ್ಕ ಪರಿಶೋಧನೆ-1 ಮತ್ತು 2), ಪಾರ್ಕ್ ಹೌಸ್ ರೋಡ್, ಬೆಂಗಳೂರು - 01
2. ಉಪನಿರ್ದೇಶಕರು, ಖಜಾನೆ ಇಲಾಖೆ, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, 2ನೇ ಮಹಡಿ ದಕ್ಷಿಣ ಬ್ಲಾಕ್, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
4. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ನ್ಯಾಯ ದೇಗುಲ, ಮೊದಲನೆಯ ಮಹಡಿ, ಹೆಚ್.ಸಿದ್ದಯ್ಯ ರಸ್ತೆ, ಬೆಂಗಳೂರು-560 027.
5. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ-2 & 10, ವಿಧಾನಸೌಧ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ವಸತಿ ಕಾನೂನು ಮತ್ತು ನಗರಾಭಿವೃದ್ಧಿ ಇಲಾಖೆ
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
8. ಸರ್ಕಾರದ ಜಂಟಿ ಕಾರ್ಯದರ್ಶಿ, ಕಾನೂನು ಇಲಾಖೆ, ಇವರ ಆಪ್ತ ಸಹಾಯಕರು, ವಿಧಾನಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.